# ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಅಫಜಲಪೂರ.

## ಸಿಸಿ ನಂ.394/2020

**ಫಿರ್ಯಾದಿಃ-** ಸರಕಾರದ ಪರವಾಗಿಃ ರೇವೂರ ಪೊಲೀಸ ಠಾಣೆ.

-ಃಃ ವಿರುದ್ಧ ಃಃ-

**ಆರೋಪಿತರುಃ -**

1. ಸಂತೋಷ ತಂದೆ ಭೀಮಸಿಂಗ್ ಚವಾಣ್,
39 ವರ್ಷ, ಉಃ ಒಕ್ಕಲುತನ/ ಜೀಪ ಚಾಲಕ,
ವಾಸಃ ಅರ್ಜುಣಗಿ ತಾಂಡಾ, ತಾಃ ಅಫಜಲಪೂರ,
ಜಿಃ ಕಲಬುರಗಿ.

2. ಮಹಾಬಲ್ಲೇಶ್ವರ ತಂದೆ ಪುಂಡಲಿಕಪ್ಪ ಕಂಬಾರ,
28 ವರ್ಷ, ಉಃ ಗ್ರಾಮ ಲೆಕ್ಕಿಗ ತಹಸಿಲ ಕಾರ್ಯಾಲಯ
ಅಫಜಲಪೂರ, ಸಾಃ ಬಮ್ಮಿಗಟ್ಟಿ ತಾಃ ಕಲಘಟಗಿ,
ಜಿಃ ದಾರವಾಡ.

## ದೋಷಾರೋಪಣೆ

ನಾನು ಶ್ರೀ ಅನಿಲ ಅಮಾತೆ., ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಅಫಜಲಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

1. ದಿನಾಂಕಃ10.04.2018 ರಂದು ರೇವೂರ ಪೊಲೀಸ ಠಾಣೆ ವ್ಯಾಪ್ತಿಯಲ್ಲಿ ಬರುವ ಅರ್ಜುಣಗಿ ತಾಂಡಾದ ಸಿಮಾಂತರದ ಚಾಸಾ 4 ಮತ್ತು ಮೃತ ತುಕಾರಾಮ ರವರಿಗೆ ಸೇರಿದ ಸ.ನಂ. 335/5 ಒಟ್ಟು ವಿಸ್ತೀರ್ಣ 5 ಎಕರೆ 12 ಗುಂಟೆ ಜಮೀನಗೆ ಸಂಬಂಧಿಸಿದಂತೆ ಆರೋಪಿತರಾದ ನೀವು ಏಕೊದ್ದೇಶದಿಂದ ಕೂಡಿಕೊಂಡು ಕಪಟದಿಂದ ಚಾಸಾ 1 ರವರ ಆಸ್ತಿಯನ್ನು 1 ನೇ ಆರೋಪಿಯು ತನ್ನ ಹೆಸರಿಗೆ ಮೋಸದಿಂದ ಜಮೀನು ಮಾಡಿಕೊಳ್ಳುವ ಉದ್ದೇಶದಿಂದ ಅಪ್ರಮಾಣಿಕತೆಯಿಂದ 2 ನೇ ಆರೋಪಿಯನ್ನು ಪ್ರೇರೆಪಿಸಿ ಚಾಸಾ 4 ರವರು ಶೇಲು ರವರು ಮೃತಪಟ್ಟಿರುತ್ತಾರೆ ಅಂತ ಸುಳ್ಳು ಮರಣ ಪ್ರಮಾಣ ಪತ್ರ ತಯಾರಿಸಿ ಚಾಸಾ 1 ರವರಿಗೆ ಮೋಸಮಾಡಿದ್ದೀರಿ ಎಂದು ಆ ಮೂಲಕ ಭಾ.ದಂ.ಸಂ.ಕಲಂ. 420 ಸಹವಾಚಕ

ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

2. ದಿನಾಂಕಃ 15.06.2018 ರಂದು ಫಿರ್ಯಾದಿ ಚಾಸಾ-1 ಸಿದ್ದು ರವರಿಗೆ ಈ ವಿಷಯ ಗೊತ್ತಾಗಿ ನೋಡಲಾಗಿ ಸದರಿ 1 ನೇ ಆರೋಪಿತನಾದ ನೀವು ದಿನಾಂಕಃ 10.04.2018 ರಂದು ಆರೋಪಿತರಾದ ನೀವು ಚಾಸಾ 1 ರವರಿಗೆ ನಷ್ಟ ಮಾಡುವ ಉದ್ದೇಶದಿಂದ ಸುಳ್ಳು ಸ್ಪಷ್ಟನೆ ನೀಡುವ ದಾಖಲೆ ರಚಿಸಿ ವಾರಸಾ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದು, ಇದರ ಸ್ವೀಕೃತಿ ಸಂಖ್ಯೆ 8179/2017-2018 ಇದ್ದು ಸದರಿ ಪ್ರಕ್ರೀಯೆಯನ್ನು ಚಾಸಾ-1 ರವರು ಅರ್ಜಿ ಸಲ್ಲಿಸಿ ತಡೆ ಹಿಡಿದಿರುತ್ತಾರೆಂದು ಹಾಗೂ ಸದರಿ 1 ಮತ್ತು 2 ನೇ ಆರೋಪಿತರಾದ ನೀವು ಚಾಸಾ-4 ಶೇಲು ರವರಿಗೆ ತಿಳಿಸದೇ ಮೋಸದಿಂದ ಚಾಸಾ-4 ಹಾಗೂ ಮೃತ ತುಕಾರಾಮ ರವರ ಹೆಸರಿಗೆ ಕಬ್ಜೆಯಲ್ಲಿರುವ ಹೊಲವನ್ನು ತನ್ನ ಹೆಸರಿಗೆ ಮಾಡಿಕೊಳ್ಳುತ್ತಿದ್ದ ಕಾರಣ, ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ.ಕಲಂ.465 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

3. ದಿನಾಂಕಃ 15.06.2018 ರಂದು ಫಿರ್ಯಾದಿ ಚಾಸಾ-1 ಸಿದ್ದು ರವರಿಗೆ ಈ ವಿಷಯ ಗೊತ್ತಾಗಿ ನೋಡಲಾಗಿ ಸದರಿ 1 ನೇ ಆರೋಪಿತನಾದ ನೀವು ದಿನಾಂಕಃ 10.04.2018 ರಂದು ಆರೋಪಿತರಾದ ನೀವು ಚಾಸಾ 1 ರವರಿಗೆ ವಂಚಿಸುವ ಉದ್ದೇಶಕ್ಕಾಗಿ ಸುಳ್ಳು ಸ್ಪಷ್ಟನೆ ನೀಡುವ ದಾಖಲೆ ರಚಿಸಿ ವಾರಸಾ ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದು, ಇದರ ಸ್ವೀಕೃತಿ ಸಂಖ್ಯೆ 8179/2017-2018 ಇದ್ದು ಸದರಿ ಪ್ರಕ್ರೀಯೆಯನ್ನು ಚಾಸಾ-1 ರವರು ಅರ್ಜಿ ಸಲ್ಲಿಸಿ ತಡೆ ಹಿಡಿದಿರುತ್ತಾರೆಂದು ಹಾಗೂ ಸದರಿ 1 ಮತ್ತು 2 ನೇ ಆರೋಪಿತರಾದ ನೀವು ಚಾಸಾ-4 ಶೇಲು ರವರಿಗೆ ತಿಳಿಸದೇ ಮೋಸದಿಂದ ಚಾಸಾ-4 ಹಾಗೂ ಮೃತ ತುಕಾರಾಮ ರವರ ಹೆಸರಿಗೆ ಕಬ್ಜೆಯಲ್ಲಿರುವ ಹೊಲವನ್ನು ತನ್ನ ಹೆಸರಿಗೆ ಮಾಡಿಕೊಳ್ಳುತ್ತಿದ್ದ ಕಾರಣ, ಆ ಮೂಲಕ ಆರೋಪಿತರಾದ ನೀವುಗಳು ಭಾ.ದಂ.ಸಂ.ಕಲಂ.468 ಸಹವಾಚಕ ಕಲಂ.34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

4. ಮೇಲೆ ಹೇಳಲಾದ ದಿನಾಂಕದಂದು ಆರೋಪಿತರಾದ ನೀವುಗಳು ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸ್ಪಷ್ಟನೆಯ ದಾಸ್ತಾವೇಜು ಎಂದು ನಿಮಗೆ ತಿಳಿದಿದ್ದರೂ ಸಹ ಅವುಗಳನ್ನು ಅಸಲಿ ದಾಖಲಾತಿಗಳೆಂದು ಅಪ್ರಮಾಣೀಕವಾಗಿ ಬಳಸಿ ಚಾಸಾ 1 ರವರಿಗೆ ಮೋಸ ಮಾಡುವ ಉದ್ದೇಶದಿಂದ ಚಾಸಾ-4 ಹಾಗೂ ಮೃತ ತುಕಾರಾಮ ರವರ ಕಬ್ಜೆಯಲ್ಲಿರುವ ಹೊಲ ಸರ್ವೆ ನಂ.135/5 ವಿಸ್ತೀರ್ಣ 5 ಎಕರೆ 12 ಗುಂಟೆ ಜಮೀನಿನ ಮಾಲೀಕನ ಖೊಟ್ಟಿ ದಾಖಲಾತಿ ತಯ್ಯಾರಿಸಿದ್ದು, ಮತ್ತು ಮೃತ ತುಕಾರಾಮ ಈತನು ಬದುಕಿರುತ್ತಾನೆ ಅಂತ ಸುಳ್ಳು ಹೆಬ್ಬೆರಳಿನ ಸಹಿ ಮಾಡಿ ಮೋಸ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 471 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವೆ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

<u>ಆರೋಪಿತರ ಹೇಳಿಕೆ</u>

ಪ್ರ:-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-1

ಆ-2

ಪ್ರ:-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ ಆ-1

ಆ-2

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕ 18-12-2025 ಪ್ರ.ದ.ನ್ಯಾದಂ. ಅಫಜಲಪೂರ.